(ಗೊಂದಲ)

ಅಧ್ಯಕ್ಷರು:– ಬೇರೆಯವರು ಮಾತನಾಡಬೇಡಿ. ಸಂಬಂಧಪಟ್ಟ ಸದಸ್ಯರು ಅವರ ತಾಲ್ಲೂಕಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಇದರಲ್ಲಿ ಬರುವುದಿಲ್ಲ ಬಿಡ್ರಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಹಾಗಾದರೆ election ನಲ್ಲಿ ಸೋತವರೆಲ್ಲ ಪ್ರತಿನಿಧಿಗಳೇ? ಹಾಗಾದರೆ ಚುನಾವಣೆಯಲ್ಲಿ ಗೆದ್ದಿರುವವರು ನಾವು ಇಲ್ಲಿಗೆ ಏಕೆ ಬರಬೇಕು? ಅವರನ್ನೇ ಕರೆದುಕೊಂಡು ಬಂದು Assembly ನಡೆಸಿಕೊಳ್ಳಿ. ನಾವು ಆ ಕಡೆಗೆ ದನಕಾಯುವುದಕ್ಕೆ ಹೋಗಿ ಬಿಡುತ್ತೇವೆ.

4) **ವಿಷಯ: ಧಾರವಾಡ ಜಿಲ್ಲೆಯ ನವಲಗುಂದ ಮತ್ತು ಹುಬ್ಬಳ್ಳಿ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ರೈತರು ಬೆಳೆದಿದ್ದ ಈರುಳ್ಳಿ, ಹೆಸರು, ಗೋವಿನ ಜೋಳ, ಹತ್ತಿ, ಮೆಣಸಿನಕಾಯಿ ಹಾಗೂ ಇನ್ನಿತರ ಬೆಳೆಗಳು ನಾಶವಾಗಿದ್ದು ಆ ಪೈಕಿ ಈರುಳ್ಳಿ ಬೆಳೆಗೆ ಮಾತ್ರ ಪರಿಹಾರ ನೀಡಿದ್ದು, ಉಳಿದ ಬೆಳೆಗಳಿಗೆ ಪರಿಹಾರ ನೀಡದೆ ರೈತರಿಗೆ ತೊಂದರೆಯಾಗಿರುವ ಬಗ್ಗೆ.**

ಶ್ರೀ ಎನ್.ಹೆಚ್. ಕೋನರೆಡ್ಡಿ (ನವಲಗುಂದ):– ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯ ನವಲಗುಂದ ಮತ್ತು ಹುಬ್ಬಳ್ಳಿ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ರೈತರು ಬೆಳೆದಿದ್ದು ಈರುಳ್ಳಿ, ಹೆಸರು, ಗೋವಿನ ಜೋಳ, ಹತ್ತಿ, ಮೆಣಸಿನಕಾಯಿ ಹಾಗೂ ಇನ್ನಿತರ ಬೆಳೆಗಳು ನಾಶವಾಗಿದ್ದು ಆ ಪೈಕಿ ಈರುಳ್ಳಿ ಬೆಳೆಗೆ ಮಾತ್ರ ಪರಿಹಾರ ನೀಡಿದ್ದು, ಉಳಿದ ಬೆಳೆಗಳಿಗೆ ಪರಿಹಾರ ನೀಡದೆ ರೈತರಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ,

ಧಾರವಾಡ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದಾಗಿ ಈರುಳ್ಳಿ, ಹೆಸರು, ಗೋವಿನ ಜೋಳ, ಹತ್ತಿ, ಮೆಣಸಿನ ಕಾಯಿ ಇನ್ನಿತರ ಬೆಳೆಗಳು ಸೇರಿ ಕೆಳಕಂಡಂತೆ ಹಾನಿಯಾಗಿರುತ್ತದೆ.

ಕ್ರ ಸಂ	ಬೆಳೆಗಳು	ಬೆಳೆ ಹಾನಿ (ಹೆಕ್ಟೇರುವಾರು)
1	ಭತ್ತ	371.00
2	ಗೋವಿನ ಜೋಳ	1699.00
3	ಬಾಜ್ರ	90.00
4	ಹೆಸರು	11120.00
5	ಶೇಂಗಾ	2816.00
6	ಸೋಯಾಬಿನ್	3980.00
7	ಹತ್ತಿ	1884.00
8	ಈರುಳ್ಳಿ	13978.00
	ಒಟ್ಟು	**35968.00**

ಈಗಾಗಲೇ ಈರುಳ್ಳಿ ಬೆಳೆ ಹಾನಿಗೆ ಎಸ್‌ಡಿಆರ್‌ಎಫ್ ಮಾರ್ಗಸೂಚಿ ದರಕ್ಕಿಂತ ಹೆಚ್ಚುವರಿ ದರದಲ್ಲಿ ಅಂದರೆ ಪ್ರತಿ ಹೆಕ್ಟೇರ್‌ಗೆ ₹ 4,500.00 ಗಳಿಗೆ ಬದಲಾಗಿ ₹ 9,000.00 ಗಳಂತೆ ಪರಿಹಾರ ನೀಡಲು ₹ 10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಅತಿವೃಷ್ಟಿಯಿಂದ ಹಾನಿಯಾದುದ್ದಕ್ಕೆ ₹ 389.49 ಕೋಟಿಗಳು ಹಾಗೂ ಬರಪರಿಸ್ಥಿತಿಗಾಗಿ ₹ 779.20 ಕೋಟಿ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೊರಾಂಡಮ್ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದಿಂದ ಬರ ಹಾಗೂ ಅತಿವೃಷ್ಟಿ ಪರಿಹಾರ ಕಾರ್ಯಗಳಿಗಾಗಿ ಎನ್‌ಡಿಆರ್‌ಎಫ್ ಅಡಿಯಲ್ಲಿ ₹ 123.05 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಕೇಂದ್ರ

ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಕಡಿಮೆ ಇದ್ದುದರಿಂದ ಇನ್ನೂ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದ್ದು ಸದ್ಯದಲ್ಲಿಯೇ ಕೇಂದ್ರದಿಂದ ಸದ್ಯದಲ್ಲಿಯೇ ಅಂತಿಮ ನಿರ್ಣಯ ನಿರೀಕ್ಷಿಸಲಾಗಿದೆ. ಕೇಂದ್ರ ಸರ್ಕಾರದ ಅಂತಿಮ ನಿರ್ಣಯದ ನಂತರ ರಾಜ್ಯ ಸರ್ಕಾರವು ಅತಿವೃಷ್ಟಿ ಪೀಡಿತ ಹಾಗೂ ಬರಪೀಡಿತ ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ಅಧ್ಯಕ್ಷರೆ, ಇವರು ಸರ್ಕಾರದ ವತಿಯಿಂದ ಭತ್ಯೆ ಏನು ಕೊಟ್ಟಿದ್ದಾರೆಂದರೆ ಇದು first time ಏನು ಮಳೆಯಾಗಿತ್ತು, ಆವತ್ತಿನ report ಬಿಟ್ಟರೆ 2ನೇ ಹವಾಮಾನ ವೈಪರೀತ್ಯದಿಂದ ಸಮಸ್ಯೆ ಆದುದ್ದನ್ನು 2ನೇ ಮಳೆಯಾದ ನಂತರ ಏನಾಯಿತು ಎನ್ನುವ ಪಟ್ಟಿ ಕೊಟ್ಟಿಲ್ಲ. ಹಳೆ ಹಾನಿ ಮಾತ್ರ ಕೊಟ್ಟಿದ್ದಾರೆ. ಅದಕ್ಕೆ ಹೊಸದಾಗಿ ಇದ್ದಂಥ ಪಟ್ಟಿಯನ್ನು ಇನ್ನೂ ಜಿಲ್ಲೆಗಳಿಂದ ತರಿಸಿದ್ದಾರೋ, ಇಲ್ಲವೋ ಗೊತ್ತಿಲ್ಲ. ಅದಕ್ಕೆ ಹಾನಿ ಪ್ರದೇಶ ಕಡಿಮೆ ಆಗಿದೆ. ಆಮೇಲೆ 30 ಹಳ್ಳಿಗೆ ಮಾತ್ರ ಪರಿಹಾರ ಕೊಟ್ಟಿದ್ದಾರೆ. ಇನ್ನೂ 40 ಹಳ್ಳಿಗೆ ಪರಿಹಾರ ಕೊಡುವುದು ಬಾಕಿ ಇದೆ. ಸರ್ಕಾರ ಯಾವಾಗ ಬಿಡುಗಡೆ ಮಾಡುತ್ತದೆಂದು ಮಾನ್ಯ ಕಂದಾಯ ಸಚಿವರು ಹೇಳಬೇಕು.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗಾಗಲೇ ಈರುಳ್ಳಿ ಬೆಳೆ ಹಾನಿಗೆ SDRF ಮಾರ್ಗಸೂಚಿ ಪ್ರಕಾರ ಹೆಚ್ಚುವರಿ ಕೊಟ್ಟಿದ್ದೇವೆ. ಅದರ ಪ್ರಕಾರ ನಾವು ಕೊಡುವುದಿದ್ದರೆ ಒಂದು ಹೆಕ್ಟೇರ್‌ಗೆ 4.5 ಸಾವಿರ ಕೊಡಬೇಕು. ಆದರೆ State Government ನಾವು ಇನ್ನೂ 4.5 ಸಾವಿರ ಸೇರಿಸಿ 9 ಸಾವಿರ ರೂ.ಗಳಂತೆ ಈಗಾಗಲೇ ಅದಕ್ಕೆ ಪರಿಹಾರ ನೀಡಲಿಕ್ಕೆ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅತಿವೃಷ್ಟಿಯಿಂದ ಹಾನಿಯಾಗಿರತಕ್ಕಂಥದ್ದಕ್ಕೆ ನಾವು ಮನವಿ ಸಲ್ಲಿಸಿರತಕ್ಕಂಥದ್ದು ₹ 389.49 ಕೋಟಿಗಳು ಹಾಗೂ ಬರಪರಿಸ್ಥಿತಿಗಾಗಿ 779 ಕೋಟಿ ರೂಪಾಯಿಗಳ ನೆರವು ನೀಡಲು ಕೇಂದ್ರ ಸರ್ಕಾರಕ್ಕೆ ಈಗಾಗಲೇ

memorandum ಸಲ್ಲಿಸಿದ್ದೇವೆ. ಮೊನ್ನೆ ನಮಗೆ ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥದ್ದು ಬರ ಹಾಗೂ ಅತಿವೃಷ್ಟಿ ಕಾರ್ಯಗಳಿಗೆ NDRF ಅಡಿಯಲ್ಲಿ ಕೇವಲ 123 ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಮತ್ತೆ ಮನವಿ ಮಾಡಿದ್ದೇವೆ. ಈಗ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಹಣ ಬಹಳ ಕಡಿಮೆ ಇದೆ.

ಅಧ್ಯಕ್ಷರು:– ಸದಸ್ಯರು ಬಹಳ simple ಪ್ರಶ್ನೆ ಕೇಳಿದ್ದಾರೆ. ವಿನಾಶವಾಗಿದ್ದು ಈ ಪೈಕಿ ಈರುಳ್ಳಿ ಬೆಳೆಗೆ ಮಾತ್ರ ಪರಿಹಾರ ನೀಡಿದ್ದು ಉಳಿದ ಬೆಳೆಗಳಿಗೆ ಪರಿಹಾರ ನೀಡದೆ ರೈತರಿಗೆ ತೊಂದರೆಯಾಗಿದೆ, ಇಷ್ಟೇ ಅವರು ಕೇಳಿರುವುದು. ಅದೂ ಕೂಡ ಅವರ ತಾಲ್ಲೂಕಿಗೆ ಸೀಮಿತವಾಗಿ ಕೇಳಿದ್ದಾರೆ, ಇಡೀ ದೇಶಕ್ಕಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಈರುಳ್ಳಿ ಬೆಲೆ ಕೊಟ್ಟಿದ್ದೇವೆ.

ಅಧ್ಯಕ್ಷರು:– ಅವರ ತಾಲ್ಲೂಕಿನಲ್ಲಿ ಕೊಡದಿದ್ದರೆ ದಯವಿಟ್ಟು ವರದಿ ತರಿಸಿಕೊಂಡು ಬೇಗ ಕೊಡುವಂತೆ ವ್ಯವಸ್ಥೆ ಮಾಡಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ಅಧ್ಯಕ್ಷರೆ, ಏನು ಅಂಕಿ ಕೊಟ್ಟಿದ್ದಾರೆ ಅದು ತಪ್ಪಿದೆ. 2ನೇ ಹಂತದ್ದು ಇದರಲ್ಲಿ ಸೇರಿಲ್ಲ. ಅದನ್ನು ಸೇರಿಸಿ ತರಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:– O.K. ಆಯಿತು. ರಾಜೀವ್ ಇಲ್ಲ. ಪ್ರಮೋದ್ ಮಧ್ವರಾಜ್ ಇಲ್ಲ. ಎನ್. ಚಲುವರಾಯಸ್ವಾಮಿ ಇಲ್ಲ.

8) ಅರ್ಧಗಂಟೆ ಕಾಲಾವಧಿ ಚರ್ಚೆ:

ಅಧ್ಯಕ್ಷರು:– ರಾಯರೆಡ್ಡಿಯವರೆ, ಅರ್ಧಗಂಟೆ ಕಾಲಾವಧಿ ಚರ್ಚೆ ತೆಗೆದುಕೊಳ್ಳೋಣ. ಒಂದು ಕೆಲಸ ಮಾಡೋಣ.

ಶ್ರೀ ಬಸವರಾಜ ರಾಯರೆಡ್ಡಿ:– ಈಗ ಮಾನ್ಯ ಮುಖ್ಯಮಂತ್ರಿಯವರು ಇಲ್ಲ.